# ಥಟ್ ಅಂತ ಮುಗಿಯದ ಕಥೆ



★ ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಕ್ವಿಜ್ 1,500ರನ್ನು ದಾಟಿ ಭಾರತದಲ್ಲೇ ದೊಡ್ಡ ದಾಖಲೆ ಸ್ಥಾಪಿಸಿತು. ನಿಮಗೆ ಅಭಿನಂದನೆಗಳು. ಇದರ ರೂವಾರಿ ನೀವು. ಕಾರ್ಯಕ್ರಮದ ಜನಪ್ರಿಯತೆಗೆ ಏನು ಕಾರಣ ಎನಿಸುತ್ತೆ?
ಮಾಹಿತಿ, ಮನರಂಜನೆ, ಅರಿವು– ಈ ಮೂರೂ ಅಂಶಗಳು ಇದರ ಯಶಸ್ಸಿಗೆ ಕಾರಣ. ಬಹುತೇಕ ಕ್ವಿಜ್‌ಗಳಲ್ಲಿ ಥಟ್ ಅಂತ ಉತ್ತರ ಹೇಳಿ ಎಂದು ಮುಂದಕ್ಕೆ ಹೋಗುತ್ತಾರೆ. ಆದರೆ ಇಲ್ಲಿ ವಿವರಣೆ ಕೊಡಲಾಗುತ್ತದೆ. ಸ್ಪರ್ಧಿಗಳ, ವೀಕ್ಷಕರ ಅರಿವನ್ನು ವಿಸ್ತರಿಸುವಲ್ಲಿ ಈ ಕಾರ್ಯಕ್ರಮ ತನ್ನದೇ ಆದ ಕೊಡುಗೆ ನೀಡಿದೆ.

★ ಇತಿಹಾಸ ಎಂದರೆ ಇಸ್ವಿ ಅಥವಾ ರಾಜ ಮಹಾರಾಜರ ಹೆಸರುಗಳನ್ನು ನೆನಪಿಟ್ಟುಕೊಳ್ಳುವುದು ಎಂಬುದಕ್ಕೆ ಸೀಮಿತಗೊಳಿಸಿದ್ದೇವೆ! ಬದುಕಿನ ವಿವರ ಕಟ್ಟಿಕೊಡದ ಬರೀ ಅಂಕಿ ಅಂಶಗಳು ಇತಿಹಾಸ ಹೇಗಾದೀತು? ಕ್ವಿಜ್‌ನಲ್ಲೂ ಇಂತಹ ಅಪಾಯ ಇಲ್ಲವೇ?
ಹೌದು. ಅದಕ್ಕೇ ಇಲ್ಲಿ ಮನುಷ್ಯನ ಎಡ ಎಡಮಿದುಳು ಮತ್ತು ಬಲಮಿದುಳು (Hemisphere) ಈ ಎರಡರ ಸಾಮರ್ಥ್ಯವನ್ನು ಪರೀಕ್ಷಿಸುವಂತೆ ಪ್ರಶ್ನೆಗಳನ್ನು ರೂಪಿಸಲಾಗಿದೆ. ಎಡಮಿದುಳು ತಾರ್ಕಿಕವಾದದ್ದು, ಬರೀ ಮಾಹಿತಿ ಕೊಡುತ್ತೆ, ಬಲಮಿದುಳು ಭಾವನಾತ್ಮಕವಾದದ್ದು. ಎರಡಕ್ಕೂ ಕೆಲಸ ಕೊಟ್ಟರೆ ವಿವರಗಳು, ವಿಶ್ಲೇಷಣೆ ಬಿಚ್ಚಿಕೊಳ್ಳುತ್ತವೆ. ಗಂಭೀರ ವಿಚಾರಕ್ಕೆ ಹೆಚ್ಚು ಹೊತ್ತು ಮನಸ್ಸನ್ನು ಕೇಂದ್ರೀಕರಿಸಲಾಗದು. ಮನೋರಂಜನೆಯೂ ಬೇಕು. ಹಾಗಾಗಿ ವೈಜ್ಞಾನಿಕವಾಗಿ ರೂಪಿಸಿದ ಕಾರ್ಯಕ್ರಮ ಇದು.

★ ಪ್ರಶ್ನೆ ರೂಪಿಸುವ ನಿಮ್ಮ ತಿಳಿವಳಿಕೆ ಬಗ್ಗೆ ಎರಡು ಮಾತಿಲ್ಲ. ಆದರೆ ಏರಿಳಿತವಿಲ್ಲದ, ಭಾವರಹಿತ ಮುಖ ಇರುತ್ತದೆ ಎಂಬುದು ಕೆಲವು ವೀಕ್ಷಕರ ಅಂಬೋಣ.
ಕ್ವಿಜ್ ಎಂದರೆ ಗಂಭೀರವಾಗಿರಬೇಕು ಎಂಬ ಕಾರಣಕ್ಕೆ ಉತ್ತರ ಅಥವಾ ವಿವರಣೆ ಕೊಡುವಾಗ ತುಸು ಹೆಚ್ಚು ಭಾವುಕರಾದರೆ ಕಾರ್ಯಕ್ರಮ ನಿರ್ವಾಹಕರು ಆಕ್ಷೇಪ ಮಾಡ್ತಾರೆ. ಹಂಗಂತ ತೀರಾ ಹರಳೆಣ್ಣೆ ಕುಡಿದವರ ತರಹ ಬೇಡ ಅಂತ ಕೆಲವಕ್ಕೆ ನಗು, ಮತ್ತೆ ಕೆಲವಕ್ಕೆ ಗಂಭೀರವಾಗಿ ಇರ್‍ತೀನಿ. ಯಾರಾದರೂ ಚೆನ್ನಾಗಿ ಉತ್ತರ ಕೊಟ್ಟಾಗ ಹೆಚ್ಚು ಶಹಬಾಸ್‌ಗಿರಿ ಕೊಟ್ಟರೆ– ಇವರಿಗೆ ಬೇಕಾದವರಿರಬೇಕು– ಎಂದು ಕೆಲವರು ಸಂಶಯ ತಾಳಿಬಿಡುತ್ತಾರೆ. ಹಾಗಾಗಿ ಒಂದು ಸಮತೋಲನ ಸಾಧಿಸಿಕೊಳ್ಳಬೇಕು.

★ ಸ್ಪರ್ಧಿಗಳಿಗೆ ನಿಮ್ಮ ಹವ್ಯಾಸ ಏನು ಎಂದು ಕೇಳಿದರೆ ಬಹುತೇಕರು ಟಿವಿ ನೋಡುವುದು ಎನ್ನುತ್ತಾರೆ. ಹಾಗಾಗಿ ಅವರಿಗೆ ಸಾಮಾನ್ಯ ಪ್ರಶ್ನೆಗಳಿಗೂ ಉತ್ತರ ಸಾಧ್ಯವಾಗುವುದಿಲ್ಲ. ಜತೆಗೆ ಅಧ್ಯಯನ, ಚರ್ಚೆಯಲ್ಲಿ ಭಾಗವಹಿಸುವಿಕೆ ಇದ್ದಂತಹವರು ಸ್ಪರ್ಧಿಗಳಾದರೆ ಒಳ್ಳೆಯದು ಎಂಬ ನಿರೀಕ್ಷೆ ಮತ್ತೆ ಕೆಲವು ವೀಕ್ಷಕರರದು...
ಜಿಲ್ಲಾವಾರು, ಶೈಕ್ಷಣಿಕ ಹಿನ್ನೆಲೆ, ವಯಸ್ಸಿನ ಆಧಾರದ ಮೇಲೆ ದೂರದರ್ಶನದವರೇ ಸ್ಪರ್ಧಿಗಳನ್ನು ಆಯ್ಕೆ ಮಾಡ್ತಾರೆ. ಒಮ್ಮೆ ಪರೀಕ್ಷೆ ನಡೆಸಿ ಶೇ.50 ಅಂಕ ತೆಗೆದುಕೊಂಡವರನ್ನು ಸ್ಪರ್ಧಿಗಳಾಗಿಸಿಕೊಳ್ಳೋಣ ಎಂದು ಒಂದು ಪ್ರಯೋಗ ಮಾಡಿದೆವು. ಅದರಲ್ಲಿ ಭಾಗವಹಿಸಿದವರು ಶೇ.20ರಷ್ಟು ಅಂಕಗಳನ್ನೂ ತೆಗೆದುಕೊಳ್ಳಲಿಲ್ಲ. ಹಾಗಾಗಿ ಹೆಚ್ಚು ಸರಳವಾದ ಪ್ರಶ್ನೆಗಳೇ ಇರ್‍ತಾವೆ. ಹೆಚ್ಚು ಆಳಕ್ಕೆ ಹೋಗೋಕಾಗಲ್ಲ. ನಾನೇ ರಾಜಿ ಮಾಡಿಕೊಂಡಿದ್ದೇನೆ.

★ ಜಿಲ್ಲಾವಾರು ಅಂತ ಹೇಳ್ತೀರಿ. ಆದರೆ ಬೆಂಗಳೂರಿನವರೇ ಹೆಚ್ಚು ಇರ್‍ತಾರಲ್ಲವೇ?
ಬೆಂಗಳೂರಿನವರು 2/3ರಷ್ಟು, ಹೊರಗಿನವರು 1/3ರಷ್ಟು ಭಾಗವಹಿಸಿದ್ದಾರೆ. ಇದು ಉಲ್ಟಾ ಆಗಬೇಕು. ಸ್ಪರ್ಧಿಗಳಿಗೆ ಪ್ರಯಾಣ ವೆಚ್ಚವನ್ನು ಮಾತ್ರ ಕೊಡುತ್ತಿರುವುದರಿಂದ ಬೆಂಗಳೂರಿನಿಂದ ದೂರ ಇರುವವರು ಹೆಚ್ಚು ಭಾಗವಹಿಸಲು ಆಗ್ತಿಲ್ಲ.

## ಡಾ.ನಾ.ಸೋಮೇಶ್ವರ

### ಕ್ವಿಜ್ ಮಾಸ್ಟರ್




★ ನೀವು ಕೇಳಿದ ಪ್ರಶ್ನೆಗೆ ಯೋಚಿಸಿ ಸ್ವಲ್ಪ ನಿಧಾನಕ್ಕೆ ಸರಿಯಾದ ಉತ್ತರವನ್ನೇ ಕೊಟ್ಟರೂ, ಒಂಚೂರು ತಡವಾಯಿತೆಂಬ ಕಾರಣಕ್ಕೆ ಬಹುಮಾನ ಸಿಗುವುದಿಲ್ಲವಲ್ಲ? ಹಾಗಾದರೆ ಇಂತಹವರು ದಡ್ಡರೆ?
ಖಂಡಿತಾ ದಡ್ಡರಲ್ಲ, ಅಂತಹವರು ಬಹಳ ಜಾಣರೇ. ಈ ಕಾರಣಕ್ಕೇ ಎರಡನೇ ಬಾರಿಗೆ ಅವಕಾಶ ನೀಡೋದು. ಆದರೆ ಇದು ಥಟ್ ಅಂತ ಹೇಳಬೇಕಾದ್ದರಿಂದ ಬಹುಮಾನ ಸಿಗುವುದಿಲ್ಲ.

★ ನಿಮಗೆ ಇದೇ ವೃತ್ತಿಯೇ?
ಇಲ್ಲ, ವೃತ್ತಿಯಿಂದ ನಾನು ವೈದ್ಯ. ಬೆಂಗಳೂರಿನಲ್ಲೇ ಹುಟ್ಟಿ ಬೆಳೆದವನು. ತಂದೆ ನಾರಪ್ಪ, ತಾಯಿ ಅಂಜನಾ. ಒಂದು ಫಾರ್ಮಾಸ್ಯುಟಿಕಲ್ ಕಂಪೆನಿಗೆ ಸಲಹೆಗಾರನಾಗಿದ್ದೇನೆ. ವಾರದ ಐದು ದಿನಗಳ ಕಾಲ ದಿನಕ್ಕೆ 12 ಗಂಟೆ ಕೆಲಸ. ದಿನಕ್ಕೆ ಕನಿಷ್ಠ ಮೂರು ಗಂಟೆ ಓದಲೇಬೇಕು. ಹಾಗಾಗಿ ನನ್ನ ಖಾಸಗಿ ಜೀವನದ ಸಾರ್ವಜನಿಕ ಸಂಗತಿಗಳನ್ನು ಕೈಬಿಟ್ಟಿದ್ದೇನೆ. ನೌಕರಿಯಲ್ಲಿರುವ ಪತ್ನಿ ರುಕ್ಮಾವತಿ ಸಂಸಾರವನ್ನು ನಿಭಾಯಿಸಿಕೊಂಡು ಹೋಗುತ್ತಾಳೆ. 2004ರ ಜನವರಿಯಲ್ಲಿ ವೆಂಕಟೇಶ್ವರಲು ನಿರ್ದೇಶಕರಾಗಿದ್ದಾಗ ಆರಂಭವಾದ ಥಟ್ ಕಾರ್ಯಕ್ರಮ ಹಾಲಿ ನಿರ್ದೇಶಕ ಮಹೇಶ ಜೋಶಿಯವರ ಸಹಕಾರದಿಂದ ಮುಂದುವರೆದಿದೆ. ಈ ಮೊದಲು ಉಷಾ ಕಿಣಿ, ಎಚ್.ಎನ್.ಆರತಿ ಕಾರ್ಯಕ್ರಮ ನಿರ್ಮಾಪಕರಾಗಿದ್ದರು. ಹಾಲಿ ರಘು ಐ.ಡಿ.ಹಳ್ಳಿ ನೋಡಿಕೊಳ್ಳುತ್ತಿದ್ದಾರೆ.

■ ನಾಗು